# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

---

ದಿನಾಂಕ: 20.06.2020 ರಂದು ಬೆಳಿಗ್ಗೆ: 11:00 ಗಂಟೆಗೆ ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇಲ್ಲಿ ನಡೆದ 2019-20 ನೇ ಸಾಲಿನ ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು

## ಹಾಜರಾದ ಸದಸ್ಯರು

| | | |
|---|---|---|
| 1. | ಪ್ರೊ. ವೈ.ಎಸ್. ಸಿದ್ದೇಗೌಡ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಬಿ.ಟಿ. ಸಂಪತ್ ಕುಮಾರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು |
| 3. | ಶ್ರೀ ಶ್ರೀನಿವಾಸ ಆರ್.ಕೆ.<br>ತಂದೆ: ಲೇಟ್ ಕಲ್ಲಪ್ಪ, ರಂಗಾಪುರ, ಕೊಟ್ಟ ಅಂಚೆ, ಶಿರಾ ತಾಲ್ಲೂಕು,<br>ತುಮಕೂರು ಜಿ.-572137. | ಸದಸ್ಯರು |
| 4. | ಕುಮಾರಿ ಐಶ್ವರ್ಯ ಸುರೇಶ್,<br>ನಂಬರ್ 220, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಎ.ಇ.ಸಿ.ಎಸ್. ಬಡಾವಣೆ,<br>ಸಂಜಯ್‌ನಗರ, ಬೆಂಗಳೂರು-560094. | ಸದಸ್ಯರು |
| 5. | ಡಾ. ನರಸಿಂಹನ್ ಎಂ.ಎಸ್.,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್, ತುಮಕೂರು ಜಿಲ್ಲೆ. | ಸದಸ್ಯರು |
| 6. | ಡಾ. ಲೀಲಾವತಿ ಟಿ.ಆರ್.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ತುಮಕೂರು. | |
| 7. | ಶ್ರೀ ಪ್ರಸನ್ನಕುಮಾರ್<br>ನಂ. 126, ಅಮರ್ ಟವರ್ಸ್, 1ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು-560009. | ಸದಸ್ಯರು |
| 8. | ಶ್ರೀ ರಾಜು<br>ನಂ.734/2, ಗೋವಿನಪುರ ರಸ್ತೆ, ಕೆ.ಆರ್. ಬಡಾವಣೆ, 8ನೇ ಅಡ್ಡರಸ್ತೆ, ಚರ್ಚ್ ಕಾಂಪೌಂಡ್ ಪಕ್ಕ, ತಿಪಟೂರು-572201. ತುಮಕೂರು ಜಿಲ್ಲೆ. | ಸದಸ್ಯರು |
| 9. | ಶ್ರೀ ಟಿ.ಡಿ. ವಿನಯ್,<br>'ನೇಮಿ ನಿವಾಸ' 5ನೇ ಅಡ್ಡರಸ್ತೆ, ಗೋಕಾಕ ರಸ್ತೆ, ಸರಸ್ವತಿಪುರಂ, ದೇವರಾಜ ಅರಸ್ ರಸ್ತೆ,<br>ತುಮಕೂರು-572105. | ಸದಸ್ಯರು |
| 10. | ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ<br>ನಂ. 472, 'ಶ್ರೀ ನಿರ್ಮಲ ನಿಲಯ', 2ನೇ ಸಿ ಮುಖ್ಯರಸ್ತೆ, 11ನೇ ಬ್ಲಾಕ್, 2ನೇ ಹಂತ,<br>ನಾಗರಭಾವಿ, ಬೆಂಗಳೂರು-560072. | ಸದಸ್ಯರು |
| 11. | ಪ್ರೊ. ಪಿ. ಪರಮಶಿವಯ್ಯ,<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,<br>ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 12. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 13. | ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |
| 14. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

## ಹಾಜರಾಗದ ಸದಸ್ಯರು

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ರವರು ಅಥವಾ ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

| | | |
|---|---|---|
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 6. | ಶ್ರೀಮತಿ ಎಂ.ಎಸ್. ಭವ್ಯ,<br>ವಿಲ್ಲಾ ನಂ.12, ಕೃಷ್ಣ ನಾರ್ಥ್‌ವುಡ್ಸ್, ಚೊಕ್ಕಣ ಹಳ್ಳಿ ವಿಲೇಜ್, ಜಕ್ಕೂರು ಪೋಸ್ಟ್,<br>ಬೆಂಗಳೂರು-560064. | ಸದಸ್ಯರು |
| 7. | ಶ್ರೀ ಸುನಿಲ್‌ಪ್ರಸಾದ್ ಟಿ.ಎಸ್.<br>'ನಂಜುಂಡೇಶ್ವರ ನಿಲಯ' ಹೆಚ್.ಪಿ.ಎಸ್. ರಸ್ತೆ, ಶಿವಮೂಕಾಂಬಿಕ ನಗರ, ತುಮಕೂರು-572102. | ಸದಸ್ಯರು |
| 8. | ಪ್ರೊ. ಡಿ.ಎಸ್. ಮುನಿಂದ್ರಕುಮಾರ್,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ. | ಸದಸ್ಯರು |

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ದಿನಾಂಕ: 20.06.2020 ಶನಿವಾರ ಬೆಳಿಗ್ಗೆ: 11.00ಕ್ಕೆ ನಡೆದ 2019-20 ನೇ ಸಾಲಿನ ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ನೇಮಕಗೊಂಡ ಪ್ರಾಂಶುಪಾಲರನ್ನು ಮಾನ್ಯ ಕುಲಪತಿಗಳು ಪರಿಚಯಿಸಿದರು ಹಾಗೂ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಮಾನ್ಯ ಸದಸ್ಯರಾದ ಶ್ರೀ ಪ್ರಸನ್ನಕುಮಾರ್ ಇವರು 2019-20ನೇ ಸಾಲಿನಲ್ಲಿ ಕೋವಿಡ್-19 ಸಂಕ್ರಾಮಿಕ ಕಾಯಿಲೆಯಿಂದ ಎಂಟು ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ಆಯೋಜಿಸಲು ಸಾಧ್ಯವಾಗದ ಕಾರಣ, ಪ್ರಸ್ತುತ ದಿನಾಂಕ 20.06.2020 ರ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು 2019-20ನೇ ಸಾಲಿನ 7ನೇ ಸಾಮಾನ್ಯ ಸಿಂಡಿಕೇಟ್ ಸಭೆ ಎಂದು ಪರಿಗಣಿಸಲು ಮನವಿ ಮಾಡಿಕೊಂಡರು. ಸದರಿ ಮನವಿಯನ್ನು ಎಲ್ಲಾ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿತು. ಮುಂದಿನ ಸಿಂಡಿಕೇಟ್ ಸಭೆಯ ದಿನಾಂಕ ನಿಗಧಿಯಾದ ನಂತರ ಕಾರ್ಯಸೂಚಿಗಳನ್ನು ಎಲ್ಲಾ ಸದಸ್ಯರುಗಳಿಗೆ ನಿಗದಿತ ಸಮಯದೊಳಗೆ ತಲುಪುವಂತೆ ಕ್ರಮವಹಿಸಲು ಕುಲಸಚಿವರಿಗೆ ತಿಳಿಸಲಾಯಿತು.

| ಕ್ರಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: 20.05.2020 ರಂದು ನಡೆದ 6ನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡ ನಿರ್ಣಯಗಳಿಗೆ ಸಂಬಂಧಿಸಿದಂತೆ, ಕೈಗೊಂಡಿರುವ ಕ್ರಮದ ಬಗ್ಗೆ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸದರಿ ನಡಾವಳಿಗಳಿಗೆ ಸಂಬಂಧಿಸಿದಂತೆ ಪರಮಶಿವಯ್ಯ ಅಧ್ಯಯನ ಪೀಠದ ಸ್ಥಳಕ್ಕೆ ಸಂಬಂಧಿಸಿದಂತೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದಾಗಿ ನಿರ್ಧರಿಸಲಾಗಿತ್ತು. ಆದರೆ, ಪ್ರಸ್ತುತ ಸಭೆಯಲ್ಲಿ ಸದರಿ ಕಾರ್ಯಸೂಚಿಯು ಇಲ್ಲದಿರುವುದರ ಬಗ್ಗೆ ಸದಸ್ಯರಾದ ಪ್ರಸನ್ನ ಕುಮಾರ್ ಅವರು ಸಭೆಗೆ ವಿವರಿಸಿದರು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಕೆಲವು ಸದಸ್ಯರು ಎಲ್ಲಾ ಪೀಠಗಳು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಇರುವಂತೆ ನಿರ್ಣಯಿಸಿರುವುದರಿಂದ, ಪ್ರಸ್ತುತ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಿರುವುದಿಲ್ಲ ಹಾಗೂ ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಕಾರ್ಯಸೂಚಿಯನ್ನು ಮಂಡಿಸಲಾಗುವುದು ಎಂದು ಸಭೆಗೆ ತಿಳಿಸಿದರು. | | | |
| ಶೈಕ್ಷಣಿಕ ವಿಭಾಗ | | | |
| 01 | 2020-21.ಸಾ.ಸಿಂ-01<br>ಶೈ.ವಿಭಾಗ-01 | ಒಂದೇ ಸ್ಥಳದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜು ಬದಲಾವಣೆಯ ಅವಕಾಶ ನೀಡಲು ಸಮಿತಿ ರಚನೆ ಹಾಗೂ ಸಕಾಲ ಸೇವೆಯಡಿಯಲ್ಲಿ ಪರಿಗಣಿಸುವ ಕ್ರಮದ ಕುರಿತು. | ಒಂದೇ ಸ್ಥಳದಲ್ಲಿರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಾಲೇಜು ಬದಲಾವಣೆಯ ಅವಕಾಶ ನೀಡುವ ಸಂಬಂಧ ಎರಡೂ ಸಮಿತಿಗಳ ಶಿಫಾರಸ್ಸು ಪಡೆದ ನಂತರ ಸಕಾಲ ಸೇವೆಯಡಿಯಲ್ಲಿ ಅರ್ಜಿಗಳನ್ನು ಪರಿಗಣಿಸಲು ನಿರ್ಣಯಿಸಲಾಯಿತು. |
| ಸಂಶೋಧನಾ ವಿಭಾಗ | | | |
| 02 | 2020-21.ಸಾ.ಸಿಂ-01<br>ಪಿಹೆಚ್.ಡಿ.ವಿಭಾಗ-01 | 2013-14ನೇ ಸಾಲಿನ ಸಂಶೋಧನಾರ್ಥಿಯಾದ ವಿನೋದ್ ಪ್ರಕಾಶ್ ಆರ್. ರವರು ವಿಶೇಷಚೇತನ ಅಡಿಯಲ್ಲಿ ಸಂಶೋಧನೆಯ ಅವಧಿ ವಿಸ್ತರಣೆ ಕೋರಿರುವ ಕುರಿತು. | 2013-14ನೇ ಸಾಲಿನ ಸಂಶೋಧನಾರ್ಥಿಯಾದ ವಿನೋದ್ ಪ್ರಕಾಶ್ ಆರ್. ರವರು ವಿಶೇಷಚೇತನ ಅಡಿಯಲ್ಲಿ ಸಂಶೋಧನೆಯ ಅವಧಿ ವಿಸ್ತರಣೆ ಕೋರಿರುವ ಕುರಿತು ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು. ಸದರಿ ವಿಷಯವು ಶೈಕ್ಷಣಿಕ |

| | | | |
|---|---|---|---|
| | | | ವಿಷಯಕ್ಕೆ ಸಂಬಂಧಿಸಿದ್ದವಾಗಿರುವುದರಿಂದ ಶೈಕ್ಷಣಿಕ ಪರಿಷತ್ತಿನ ಸಭೆಗೆ ಮಂಡಿಸುವಂತೆ ಶ್ರೀ ಪ್ರಸನ್ನ ಕುಮಾರ್ ಅವರು ಸಭೆಗೆ ತಿಳಿಸಿದರು. ಮಾನ್ಯ ಕುಲಪತಿಗಳು ಸದರಿ ವಿದ್ಯಾರ್ಥಿಯ ಸಂಶೋಧನಾ ಅವಧಿ ಪೂರ್ಣಗೊಳ್ಳುತ್ತಿದ್ದು, ಅವರ ಸಂಶೋಧನಾ ಭವಿಷ್ಯದ ಹಿತದೃಷ್ಠಿಯಿಂದ ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲಾಗಿದೆ ಎಂದು ವಿವರಿಸಿದರು. ಸದರಿ ಸಂಶೋಧನಾರ್ಥಿಯ ಸಂಶೋಧನಾ ಪ್ರಗತಿಯ ಬಗ್ಗೆ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ ಮಾಹಿತಿ ನೀಡುವಂತೆ ಕೋರಿದರು. ಮಾನ್ಯ ಕುಲಪತಿಗಳು ಸದರಿ ವಿದ್ಯಾರ್ಥಿಯ ಸಂಶೋಧನಾ ಪ್ರಗತಿಯ ಬಗ್ಗೆ ವಿವರಿಸಿದರು. ಅಂತಿಮವಾಗಿ ಸದರಿ ವಿದ್ಯಾರ್ಥಿಗೆ ಮಾತ್ರ ಒಂದು ವರ್ಷದ ಅವಧಿಗೆ ಯಾವುದೇ ದಂಡಶುಲ್ಕವಿಲ್ಲದೆ ಸಂಶೋಧನಾ ಅವಧಿಯನ್ನು ವಿಸ್ತರಿಸಲು ನಿರ್ಣಯಿಸಲಾಯಿತು. |
| | | ಸಿಬ್ಬಂದಿ ವಿಭಾಗ | |
| 03 | 2020-21.ಸಾ.ಸಿಂ-01<br>ಸಿಬ್ಬಂದಿ ವಿಭಾಗ-01 | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಸಂಬಂಧ ದಿನಾಂಕ 30.05.2020 ರಂದು ನಡೆದ ನೇಮಕಾತಿ ಮಂಡಳಿ ಸಭೆಯು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ವರದಿ ಕುರಿತು. | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಸಂಬಂಧ ದಿನಾಂಕ 30.05.2020 ರಂದು ನಡೆದ ನೇಮಕಾತಿ ಮಂಡಳಿ ಸಭೆಯು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ವರದಿ ಬಗ್ಗೆ ಸಭೆಗೆ ಕುಲಸಚಿವರು ಮಾಹಿತಿ ನೀಡಿ, ಮುಚ್ಚಿದ ಲಕೋಟೆಯನ್ನು ಸಭೆಯ ಮುಂದೆ ಮಂಡಿಸಿದರು. ನೇಮಕಾತಿ ಮಂಡಳಿಯನ್ನು ಕೆಎಸ್‌ಯು 57 ರನ್ವಯ ರಚಿಸಿ, ನೇಮಕಾತಿ ಮಂಡಳಿ ಸಭೆಯನ್ನು ನಡೆಸಿರುವುದರ ಬಗ್ಗೆ ಕುಲಪತಿಗಳು ವಿವರಿಸಿದರು ಹಾಗೂ ಇದಕ್ಕೆ ಸಂಬಂಧಪಟ್ಟ ಪದೋನ್ನತಿ ಪ್ರಕ್ರಿಯೆಗಳು ಮತ್ತು ಮಾಹಿತಿಗಳು ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು. ಈ ಸಂಬಂಧ ಹುದ್ದೆಗಳ ಮಾಹಿತಿ ಮತ್ತು ಪದೋನ್ನತಿ ಅವಕಾಶಗಳ ಬಗ್ಗೆ ಸದಸ್ಯರಾದ ಶ್ರೀ ಶ್ರೀನಿವಾಸ ಆರ್.ಕೆ., ಶ್ರೀ ಪ್ರಸನ್ನ ಕುಮಾರ್ ಮತ್ತು ಶ್ರೀ ರಾಜು ರವರು ಸಭೆಗೆ ಮಾಹಿತಿ ನೀಡುವಂತೆ ಕೋರಿದರು. ಸಭೆಯ ಸದಸ್ಯರುಗಳು ನೇಮಕಾತಿ ಮಂಡಳಿಯ ನಡಾವಳಿಗಳನ್ನು ಪರಿಶೀಲಿಸಿದರು. ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಬೋಧಕೇತರ ಸಿಬ್ಬಂದಿಗಳ ಜ್ಯೇಷ್ಠತಾಪಟ್ಟಿ, ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಹಾಗೂ ನೇಮಕಾತಿ ಮಂಡಳಿ ಮತ್ತು ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯ ವಿವರಗಳನ್ನು ಸದಸ್ಯರುಗಳಿಗೆ ನೀಡಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು. |

| | | | |
|---|---|---|---|
| 04 | 2020-21.ಸಾ.ಸಿಂ-01 ಸಿಬ್ಬಂದಿ ವಿಭಾಗ-02 | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದೋನ್ನತಿಗೆ ಅವಕಾಶವಿಲ್ಲದ ತಾಂತ್ರಿಕ ಸಿಬ್ಬಂದಿಗಳಿಗೆ ಬಡ್ತಿ ನೀಡಲು ಹುದ್ದೆಗಳ ಸೃಜನೆ ಕುರಿತು. | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದೋನ್ನತಿಗೆ ಅವಕಾಶವಿಲ್ಲದ ತಾಂತ್ರಿಕ ಸಿಬ್ಬಂದಿಗಳಿಗೆ ಬಡ್ತಿ ನೀಡಲು ಹುದ್ದೆಗಳ ಸೃಜನೆ ಕುರಿತಂತೆ ಬೋಧಕೇತರ ಸಿಬ್ಬಂದಿಗಳ ಜ್ಯೇಷ್ಠತಾಪಟ್ಟಿ, ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಹಾಗೂ ನೇಮಕಾತಿ ಮಂಡಳಿ ಮತ್ತು ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯ ವಿವರಗಳನ್ನು ಸದಸ್ಯರುಗಳಿಗೆ ನೀಡಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು. |
| | | **ಪರೀಕ್ಷಾ ವಿಭಾಗ** | |
| 05 | 2020-21.ಸಾ.ಸಿಂ-01 ಪರೀಕ್ಷಾ ವಿಭಾಗ-01 | 2020-21ನೇ ಶೈಕ್ಷಣಿಕ ಸಾಲಿಗೆ ಈ ಹಿಂದೆ ಇದ್ದ ಎಲ್ಲಾ ಸ್ನಾತಕೋತ್ತರ ಪರೀಕ್ಷಾ ಮಂಡಳಿ (BOE) ಗಳನ್ನು ಮುಂದುವರೆಸಿರುವ ಕುರಿತು. | 2020-21ನೇ ಶೈಕ್ಷಣಿಕ ಸಾಲಿಗೆ ಈ ಹಿಂದೆ ಇದ್ದ ಎಲ್ಲಾ ಸ್ನಾತಕೋತ್ತರ ಪರೀಕ್ಷಾ ಮಂಡಳಿ (BOE) ಗಳನ್ನು ಕೋವಿಡ್-19 ಹಿನ್ನೆಲೆಯಲ್ಲಿ ಮುಂದುವರೆಸಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಸ್ಥಿರೀಕರಿಸಿತು. |
| 06 | 2020-21.ಸಾ.ಸಿಂ-01 ಪರೀಕ್ಷಾ ವಿಭಾಗ-02 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ಕರಾರು ಒಪ್ಪಂದ ಮಾಡಿಕೊಂಡಿದ್ದು, ಸ್ಥಿರೀಕರಣ ಕೋರಿ. | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ, ಕರಾರು ಒಪ್ಪಂದ ಮಾಡಿಕೊಂಡಿರುವ ಕುರಿತು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ವಿವರಿಸಿದರು. ಸದಸ್ಯರಾದ ಶ್ರೀ ಶ್ರೀನಿವಾಸ ಆರ್.ಕೆ. ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆಗಳ ಮಾಹಿತಿಯನ್ನು ಕೋರಿದರು. ಕುಲಸಚಿವರು (ಪರೀಕ್ಷಾಂಗ) ಇವರು ಮಾಹಿತಿಯನ್ನು ನೀಡಿದರು. ಸದಸ್ಯರಾದ ಪ್ರಸನ್ನ ಕುಮಾರ್ ಅವರು ಅವಧಿಪೂರ್ಣಗೊಳ್ಳುವ ಪೂರ್ವದಲ್ಲಿ ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯದಿರುವ ಕುರಿತು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಮಾಹಿತಿ ಕೋರಿದರು. ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯವು ಕೈಗೊಂಡಿರುವ ನಿರ್ಣಯವನ್ನು ಸ್ಥಿರೀಕರಿಸಿ, ಇನ್ನು ಮುಂದೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಕ್ರಮವಹಿಸುವಂತೆ ನಿರ್ಣಯಿಸಲಾಯಿತು. |
| | | **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | |
| 07 | 2020-21.ಸಾ.ಸಿಂ-01 ಸಾ & ಅ ವಿಭಾಗ-01 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಗತ್ಯವಿರುವ ಪ್ರಯೋಗಾಲಯ ಉಪಕರಣಗಳನ್ನು ಸರಬರಾಜು ಪಡೆಯುವ ಸಂಬಂಧ. | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಗತ್ಯವಿರುವ ಪ್ರಯೋಗಾಲಯ ಉಪಕರಣಗಳನ್ನು ಸರಬರಾಜು ಪಡೆಯುವ ಸಂಬಂಧ ಸದಸ್ಯರಾದ ಶ್ರೀ ಟಿ.ಡಿ. ವಿನಯ್ ಅವರು ಗುಣಮಟ್ಟದ ಪರಿಶೀಲನೆ ಬಗ್ಗೆ ಮಾಹಿತಿ ಕೋರಿದರು. ಇದರ ಬಗ್ಗೆ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರು ಗುಣಮಟ್ಟದ ಬಗ್ಗೆ ಪರಿಶೀಲಿಸಿದ ನಂತರ ಅಗತ್ಯ ಕ್ರಮವಹಿಸಲಾಗುವುದೆಂದು ಮಾನ್ಯ ಕುಲಪತಿಗಳು |

| | | | |
|---|---|---|---|
| | | | ಸಭೆಗೆ ತಿಳಿಸಿದರು. ಸರಬರಾಜು ಪಡೆದ ನಂತರ ಎಲ್ಲಾ ಅಗತ್ಯ ಉಪಕರಣಗಳ ಗುಣಮಟ್ಟವನ್ನು ಪರಿಶೀಲಿಸಿ, ನಂತರ ದಾಸ್ತಾನಿಗೆ ತೆಗೆದುಕೊಳ್ಳುವಂತೆ ಸದಸ್ಯರಾದ ಶ್ರೀ ಟಿ.ಡಿ. ವಿನಯ್ ಮತ್ತು ಡಾ. ಭಾಗ್ಯಲಕ್ಷ್ಮಿ ಸಲಹೆ ನೀಡಿದರು ಹಾಗೂ ಸದರಿ ವಿಷಯದ ಬಗ್ಗೆ ಸಭೆಯು ಅನುಮೋದನೆಯನ್ನು ನೀಡಿತು. |
| 08 | 2020-21.ಸಾ.ಸಿಂ-01 ಸಾ & ಅ ವಿಭಾಗ-02 | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ಮುದ್ರಿತ ಲೇಖನ ಸಾಮಗ್ರಿಗಳನ್ನು ಸರಬರಾಜು ಪಡೆಯುವ ಸಂಬಂಧ | ತುಮಕೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ಮುದ್ರಿತ ಲೇಖನ ಸಾಮಗ್ರಿಗಳನ್ನು ಸರಬರಾಜು ಪಡೆಯುವ ಸಂಬಂಧ ಅತಿ ಕಡಿಮೆ ದರ ನಮೂದಿಸಿರುವ ಸಂಸ್ಥೆಯೊಂದಿಗೆ ದರಸಂಧಾನವನ್ನು ನಡೆಸಿ, ಅಗತ್ಯ ಕ್ರಮವಹಿಸಲಾಗಿದೆ ಎಂದು ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು. ಮಾನ್ಯ ಸದಸ್ಯರಾದ ಟಿ.ಡಿ. ವಿನಯ್ ಅವರು ಗುಣಮಟ್ಟದ ಬಗ್ಗೆ ಮಾಹಿತಿಯನ್ನು ಕೋರಿದರು. ಸದಸ್ಯರಾದ ಶ್ರೀ ಟಿ.ಡಿ. ವಿನಯ್ ಅವರು ರಾಜಾ ಪ್ರಿಂಟರ್ಸ್ ಸಂಸ್ಥೆಯು Authorization Certificate not-comply ಆಗಿದ್ದರು ಪರಿಗಣಿಸಿರುವ ಕುರಿತು ಮಾಹಿತಿ ನೀಡುವಂತೆ ಕೋರಿದರು. ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಪ್ರಸ್ತುತ ಪ್ರಕ್ರಿಯೆಯನ್ನು ಸ್ಥಿರೀಕರಿಸಿ, ಹುಂಡಿಗಳನ್ನು ಪಾವತಿಸುವ ಪೂರ್ವದಲ್ಲಿ ಗುಣಮಟ್ಟವನ್ನು ಪರೀಕ್ಷಿಸಿ ಖಾತ್ರಿ ಪಡಿಸಿಕೊಂಡು ಎ-ಗ್ರೇಡ್ ಪ್ರಮಾಣಪತ್ರವನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಹುಂಡಿಯನ್ನು ಪಾವತಿಸಲು ಕ್ರಮವಹಿಸುವಂತೆ ನಿರ್ಣಯಿಸಿತು.<br><br>ಇನ್ನು ಮುಂದೆ ವಿಶ್ವವಿದ್ಯಾನಿಲಯದ ಹಂತದಲ್ಲಿಯೇ ಗುಣಮಟ್ಟವನ್ನು ಪರೀಕ್ಷಿಸಲು ಜಿಎಸ್‌ಎಂ ಯಂತ್ರವನ್ನು ಖರೀದಿಸಲು ಶ್ರೀ ಟಿ.ಡಿ. ವಿನಯ್ ಅವರು ಸಲಹೆ ನೀಡಿದರು. ಸಣ್ಣ ಪ್ರಮಾಣದಲ್ಲಿ ಪ್ರಿಂಟಿಂಗ್‌ಪ್ರೆಸ್ ಪ್ರಾರಂಭಿಸಲು ಸದಸ್ಯರಾದ ಶ್ರೀ ಪ್ರಸನ್ನ ಕುಮಾರ್ ಅವರು ಸಭೆಗೆ ತಿಳಿಸಿದರು ಹಾಗೂ ಸದರಿಯಂತೆ ಕ್ರಮವಹಿಸುವಂತೆ ನಿರ್ಣಯಿಸಲಾಯಿತು. |
| 09 | 2020-21.ಸಾ.ಸಿಂ-01 ಸಾ & ಅ ವಿಭಾಗ-03 | ಮೆ. ಹೈಟೆಕ್ ಪ್ರಿಂಟ್ ಸಿಸ್ಟಮ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಹಣ ಪಾವತಿಸುವ ಕುರಿತು. | ಮೆ. ಹೈಟೆಕ್ ಪ್ರಿಂಟ್ ಸಿಸ್ಟಮ್ಸ್ ಲಿಮಿಟೆಡ್, ಬೆಂಗಳೂರು ಇವರಿಗೆ ಹಣ ಪಾವತಿಸುವ ಸಂಬಂಧ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಸರಬರಾಜು ಆದೇಶ ಮತ್ತು ಸರಬರಾಜು ಪಡೆದ ಪತ್ರಗಳ ದಿನಾಂಕಗಳಲ್ಲಿ ಗೊಂದಲ ಇರುವ ಕುರಿತು ಸದಸ್ಯರಾದ ಶ್ರೀ ಪ್ರಸನ್ನ ಕುಮಾರ್ ಅವರು ಸಭೆಯ ಗಮನಕ್ಕೆ ತಂದರು ಹಾಗೂ ಈ ರೀತಿಯ ಗೊಂದಗಳನ್ನು ಇನ್ನು ಮುಂದೆ ಪರಿಶೀಲಿಸುವಂತೆ ಸದಸ್ಯರುಗಳು |

| | | | |
|---|---|---|---|
| | | | ತಿಳಿಸಿದರು. ಕುಲಪತಿಗಳು ಸದಸ್ಯರುಗಳ ಮನವಿಯಂತೆ ಅಗತ್ಯ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸರಿಪಡಿಸಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ನಿರ್ಣಯಿಸಿತು. ಸದಸ್ಯರಾದ ಕು. ಐಶ್ವರ್ಯ ಸುರೇಶ್ ಮತ್ತು ಶ್ರೀ ಶ್ರೀನಿವಾಸ್ ಆರ್.ಕೆ. ಅವರು ಯಾವುದೇ ಸರಬರಾಜು ಪಡೆದ ನಂತರ ಸಿಂಡಿಕೇಟ್ ಸದಸ್ಯರಿರುವಂತೆ ಒಂದು ಪರಿಶೀಲನಾ ಸಮಿತಿಯನ್ನು ರಚಿಸುವುದು ಸೂಕ್ತ ಎಂದು ಸಲಹೆ ನೀಡಿದರು. |
| 10 | 2020-21.ಸಾ.ಸಿಂ-01<br>ಸಾ & ಅ ವಿಭಾಗ-04 | ವಿಶ್ವವಿದ್ಯಾನಿಲಯದ ಸಂಶೋಧನಾ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ಸಹಾಯಕರ ಸೇವೆಯನ್ನು ಮುಂದುವರೆಸುವ ಕುರಿತು. | ವಿಶ್ವವಿದ್ಯಾನಿಲಯದ ಸಂಶೋಧನಾ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಶೋಧನಾ ಸಹಾಯಕರ ಕಾರ್ಯಭಾರವನ್ನು ಹಾಗೂ ಅನುದಾನದ ಬಗ್ಗೆ ಹಣಕಾಸು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಸದರಿ ಸಂಶೋಧನಾ ಸಹಾಯಕರ ಸೇವೆಯನ್ನು ಒಂದು ದಿನ ಭಂಗಗೊಳಿಸಿ ಅದೇ ವೇತನದಡಿಯಲ್ಲಿ ಪೂರ್ವಾನ್ವಯವಾಗುವಂತೆ 11 ತಿಂಗಳ ಅವಧಿಗೆ ಅವರ ಸೇವೆಯನ್ನು ಮುಂದುವರೆಸಲು ಅನುಮೋದಿಸಲಾಯಿತು. |
| | | ಸಿಬ್ಬಂದಿ ವಿಭಾಗ | |
| 11 | 2020-21.ಸಾ.ಸಿಂ-01<br>ಸಿಬ್ಬಂದಿ ವಿಭಾಗ-03 | ಹಂಗಾಮಿ ಸಂಚಿತ ವೇತನ ನೌಕರರ ಸೇವೆಯನ್ನು ಮುಂದುವರೆಸುವ ಕುರಿತು. | ಹಂಗಾಮಿ ಸಂಚಿತ ವೇತನ ನೌಕರರ ಸೇವೆಯನ್ನು ಮುಂದುವರೆಸಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು. |
| 12 | 2020-21.ಸಾ.ಸಿಂ-01<br>ಸಿಬ್ಬಂದಿ ವಿಭಾಗ-04 | ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನಾ (ಎನ್.ಎಸ್.ಎಸ್) ವಿಭಾಗಕ್ಕೆ ನೇಮಕಗೊಂಡಿರುವ ನೌಕರರ ಸೇವೆಯನ್ನು ಮುಂದುವರೆಸಿ ಹೊರಡಿಸಿರುವ ಅಧಿಕೃತ ಜ್ಞಾಪನವನ್ನು ಸ್ಥಿರೀಕರಿಸುವ ಕುರಿತು. | ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನಾ (ಎನ್.ಎಸ್.ಎಸ್) ವಿಭಾಗಕ್ಕೆ ನೇಮಕಗೊಂಡಿರುವ ನೌಕರರ ಸೇವೆಯನ್ನು ಮುಂದುವರೆಸಿ ಹೊರಡಿಸಿರುವ ಅಧಿಕೃತ ಜ್ಞಾಪನವನ್ನು ಸಭೆಯು ಸ್ಥಿರೀಕರಿಸಿತು. |

ವಿಶ್ವವಿದ್ಯಾನಿಲಯದ ವಿವಿಧ ಉಪ ಸಮಿತಿಗಳನ್ನು ರಚಿಸುವ ಕುರಿತು ಚರ್ಚೆ ಮತ್ತು ನಿರ್ಣಯ

ವಿಶ್ವವಿದ್ಯಾನಿಲಯದ ವಿವಿಧ ಸಮಿತಿಗಳಲ್ಲಿ ಸಿಂಡಿಕೇಟ್ ಸದಸ್ಯರುಗಳಿರುವ ಮಾಹಿತಿಯನ್ನು ಹಾಗೂ ಇತರೆ ಎಲ್ಲಾ ಸಮಿತಿಗಳ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು ಹಾಗೂ ಸದಸ್ಯರುಗಳಿಗೆ ಮಾಹಿತಿಯನ್ನು ನೀಡಿದರು. ಈ ಕೆಳಕಂಡ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಿಸಲು ನಿರ್ಣಯಿಸಲಾಯಿತು.

1. ಹಾಸ್ಟೆಲ್ ಸಲಹಾ ಸಮಿತಿ – ಕುಲಸಚಿವರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ಶ್ರೀ ರಾಜು, ಡಾ. ಭಾಗ್ಯಲಕ್ಷ್ಮಿ ಹಿರೇಂದ್ರ ಶಾ ಮತ್ತು ಶ್ರೀ ಸುನಿಲ್ ಪ್ರಸಾದ್
2. ಹಾಸ್ಟೆಲ್ ಫುಡ್ ಸಮಿತಿ – ಕುಲಸಚಿವರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ಶ್ರೀ ಶ್ರೀನಿವಾಸ ಮತ್ತು ಶ್ರೀ ವಿನಯ್ ಟಿ.ಡಿ. ಮತ್ತು ಕು. ಐಶ್ವರ್ಯ ಸುರೇಶ್
3. ಖರೀದಿ ಸಮಿತಿ – ಮಾನ್ಯ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು, ಕು. ಐಶ್ವರ್ಯ ಸುರೇಶ್, ಶ್ರೀ ರಾಜು ಮತ್ತು ಶ್ರೀ ವಿನಯ್ ಟಿ.ಡಿ.
4. ಘಟಿಕೋತ್ಸವ ಸಮಿತಿ – ಮಾನ್ಯ ಕುಲಪತಿಗಳು, ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ಡಾ. ಭಾಗ್ಯಲಕ್ಷ್ಮೀ, ಶ್ರೀಮತಿ. ಭವ್ಯ, ಕು. ಐಶ್ವರ್ಯ ಸುರೇಶ್ ಮತ್ತು ಶ್ರೀ ಪಸನ್ನ ಕುಮಾರ್
5. ಟೆಂಡರ್ ಮತ್ತು ವರ್ಕ್ಸ್ ಸಮಿತಿ – ಮಾನ್ಯ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು, ಶ್ರೀ ಶ್ರೀನಿವಾಸ್, ಶ್ರೀ ವಿನಯ್

| | | | |
|---|---|---|---|
| ಟಿ.ಡಿ. ಮತ್ತು ಶ್ರೀ ಸುನಿಲ್ ಪ್ರಸಾದ್<br>6. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ – ಕುಲಸಚಿವರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ಹಣಕಾಸು ಅಧಿಕಾರಿಗಳು, ಶ್ರೀಮತಿ. ಭವ್ಯ ಮತ್ತು ಶ್ರೀ ಸುನಿಲ್ ಪ್ರಸಾದ್<br>7. ಹ್ಯೂಮನ್ ಎಥಿಕ್ಸ್ ಸಮಿತಿ ಮತ್ತು equal opportunity cell – ಮಾನ್ಯ ಕುಲಪತಿಗಳು, ಕು. ಐಶ್ವರ್ಯ ಸುರೇಶ್, ಡಾ. ಭಾಗ್ಯಲಕ್ಷ್ಮೀ ಮತ್ತು ವಿಜ್ಞಾನ ನಿಕಾಯ ಡೀನರು<br>8. ಶುಲ್ಕ ನಿಗಧಿ ಸಮಿತಿ – ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ), ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿರ್ದೇಶಕರು, ಹಣಕಾಸು ಅಧಿಕಾರಿಗಳು, ಶ್ರೀ ಪ್ರಸನ್ನ ಕುಮಾರ್, ಡಾ. ಭಾಗ್ಯಲಕ್ಷ್ಮೀ ಮತ್ತು ಪ್ರೊ. ಪರಮಶಿವಯ್ಯ | | | |
| **SCP & TSP ಯೋಜನೆಯ ವಿವರಗಳ ಮಾಹಿತಿ**<br><br>SCP & TSP ಯೋಜನೆಯಡಿಯಲ್ಲಿ 2017-18, 2018-19 ಮತ್ತು 2019-20 ನೇ ಸಾಲುಗಳಲ್ಲಿ ಮಂಜೂರಾದ ಅನುದಾನ ಹಾಗೂ ವೆಚ್ಚಗಳ ಕುರಿತು ಹಣಕಾಸು ಅಧಿಕಾರಿಗಳು ಸಭೆಗೆ ಮಾಹಿತಿಯನ್ನು ನೀಡಿದರು. ಕಳೆದ 03 ಸಾಲುಗಳಲ್ಲಿ ಅನುದಾನವನ್ನು ಸಮರ್ಪಕವಾಗಿ ವೆಚ್ಚ ಮಾಡಿದ್ದು, ಅನುದಾನಕ್ಕಿಂತ ವೆಚ್ಚಗಳು ಹೆಚ್ಚಾಗಿ ಮಾಡಲಾಗಿರುತ್ತದೆ. 2020-21 ನೇ ಸಾಲಿನಲ್ಲಿ ಕಳೆದ ಸಾಲುಗಳ ಅನುದಾನಕ್ಕಿಂತ ಅತ್ಯಂತ ಕಡಿಮೆ ಅನುದಾನ ಸರ್ಕಾರದಿಂದ ಮಂಜೂರಾಗಿರುತ್ತದೆ. ಆದುದರಿಂದ, ಸರ್ಕಾರಕ್ಕೆ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು ಎಂಬ ಮಾಹಿತಿಯನ್ನು ಹಣಕಾಸು ಅಧಿಕಾರಿಗಳು ಸಭೆಗೆ ವಿವರಿಸಿದರು. | | | |
| **ಹೆಚ್ಚುವರಿ ಕಾರ್ಯಸೂಚಿಗಳು** | | | |
| **ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ** | | | |
| 13 | 2020-21.ಸಾ.ಸಿಂ-01<br>ಸಾ & ಅ ವಿಭಾಗ-05 | 2019-20ನೇ ಸಾಲಿನ ವಾರ್ಷಿಕ ವರದಿಯ ಕುರಿತು. | 2019-20ನೇ ಸಾಲಿನ ವಾರ್ಷಿಕ ವರದಿಯ ಕುರಿತು ಸರ್ಕಾರ ನೀಡಿರುವ ನಮೂನೆಯಲ್ಲಿ ವಾರ್ಷಿಕ ವರದಿಯನ್ನು ಸಿದ್ಧಪಡಿಸಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ಮಾನ್ಯ ಕುಲಪತಿಗಳು ಸಭೆಗೆ ನೀಡಿದರು ಹಾಗೂ ಕರಡು ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು. |
| 14 | 2020-21.ಸಾ.ಸಿಂ-01<br>ಸಾ & ಅ ವಿಭಾಗ-06 | ಮೆ. ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್‌ಪ್ರೈಸಸ್, ಭದ್ರಾವತಿ ಇವರಿಗೆ ಹಣಪಾವತಿಸಿರುವ ಕುರಿತು. | ಮೆ. ಮಲ್ಲೇಶ್ವರ ಪ್ರಿಂಟರ್ಸ್ ಅಂಡ್ ಎಂಟರ್‌ಪ್ರೈಸಸ್, ಭದ್ರಾವತಿ ಇವರಿಗೆ ಹಣಪಾವತಿಸುವ ಸಂಬಂಧ ಈ ಹಿಂದಿನ ದರಕ್ಕಿಂತ ಪ್ರಸ್ತುತ ವರ್ಷದಲ್ಲಿ ಗಣನೀಯವಾಗಿ ದರವನ್ನು ಕಡಿಮೆ ಮಾಡಿರುವ ಕುರಿತು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ತದನಂತರ, ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ, ಕು. ಐಶ್ವರ್ಯ ಸುರೇಶ್ ಮತ್ತು ಶ್ರೀ ಪ್ರಸನ್ನ ಕುಮಾರ್ ಅವರು ಘಟಿಕೋತ್ಸವ ಪ್ರಮಾಣಪತ್ರದ ಗುಣಮಟ್ಟದ ಬಗ್ಗೆ ಪರಿಶೀಲಿಸುವಂತೆ ಸಭೆಗೆ ತಿಳಿಸಿದರು. ಸದರಿ ಪ್ರಮಾಣಪತ್ರಗಳು ಸರ್ಕಾರ ಸೂಚಿಸಿರುವ ಸಂಸ್ಥೆಯಿಂದ ನಿಗದಿಯಾಗಿರುವ ದರದಲ್ಲಿ ಹಾಗೂ ಗುಣಮಟ್ಟದಲ್ಲಿ ಖರೀದಿಸಲಾಗುತ್ತಿದೆ ಎಂದು ಸಭೆಗೆ ಕುಲಪತಿಗಳು ವಿವರಿಸಿದರು. ಘಟಿಕೋತ್ಸವ ಪ್ರಮಾಣ ಪತ್ರಗಳ ಅವಶ್ಯಕತೆಯ ಪ್ರಮಾಣ, ಘಟಿಕೋತ್ಸವಕ್ಕೆ ವಿದ್ಯಾರ್ಥಿಗಳಿಂದ ಪಡೆಯಲಾಗುತ್ತಿರುವ ಶುಲ್ಕದ ವಿವರ, ಖರೀದಿಸಿರುವ ಪ್ರಮಾಣದ ಮಾಹಿತಿಯನ್ನು ನೀಡುವಂತೆ ಶ್ರೀ ಟಿ.ಡಿ. ವಿನಯ್ ಅವರು ಕೋರಿದರು. ಮಾನ್ಯ ಕುಲಪತಿಗಳು ಮಾಹಿತಿಯನ್ನು ನೀಡಿದರು. ಮುಂದಿನ ದಿನಗಳಲ್ಲಿ ಉತ್ತಮ ಗುಣಮಟ್ಟದ |

| | | | |
|---|---|---|---|
| | | | ಪ್ರಮಾಣಪತ್ರವನ್ನು ಖರೀದಿಸುವಂತೆ ಕ್ರಮವಹಿಸಲು ಸದಸ್ಯರುಗಳಾದ ಡಾ. ಭಾಗ್ಯಲಕ್ಷ್ಮೀ ಹಿರೇಂದ್ರ ಶಾ, ಕು. ಐಶ್ವರ್ಯ ಸುರೇಶ್, ಶ್ರೀ ಪ್ರಸನ್ನ ಕುಮಾರ್, ಶ್ರೀ ಟಿ.ಡಿ. ವಿನಯ್ ಅವರು ಸಭೆಗೆ ತಿಳಿಸಿದರು. ಇನ್ನು ಮುಂದೆ ಘಟಿಕೋತ್ಸವ ಪ್ರಮಾಣವನ್ನು ಖರೀದಿಸುವ ಪೂರ್ವದಲ್ಲಿ ಪ್ರಮಾಣಪತ್ರದ ಮಾದರಿಯನ್ನು ಹಾಗೂ ಈ ಹಿಂದಿನ ಸಾಲಿನಲ್ಲಿ ಖರೀದಿಸಿರುವ ಪ್ರಮಾಣ ಪತ್ರಗಳ ಮಾದರಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಸದಸ್ಯರುಗಳು ಸಭೆಗೆ ತಿಳಿಸಿದರು. ಅದರಂತೆ ಅಗತ್ಯ ಕ್ರಮವಹಿಸಲಾಗುವುದೆಂದು ಕುಲಸಚಿವರು (ಪರೀಕ್ಷಾಂಗ) ಸಭೆಗೆ ತಿಳಿಸಿದರು. ಸದರಿ ವಿಷಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ರೂ. 1,19,070/- ಗಳನ್ನು ಸಂಬಂಧಪಟ್ಟ ಸಂಸ್ಥೆಗೆ ಪಾವತಿಸಲು ಸಭೆಯು ಅನುಮೋದಿಸಿತು. |
| 15 | 2020-21.ಸಾ.ಸಿಂ-01<br>ಸಾ & ಅ ವಿಭಾಗ-07 | ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಕ್ರೀಡಾ ಮತ್ತು Gym ಉಪಕರಣಗಳನ್ನು ಭೌತಿಕ ಪರಿಶೀಲನೆಗಾಗಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಪ್ರದರ್ಶಿಸುವ ಕುರಿತು. | ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗಕ್ಕೆ ಕ್ರೀಡಾ ಮತ್ತು Gym ಉಪಕರಣಗಳನ್ನು ಖರೀದಿಸುವ ಸಂಬಂಧ ಈವರೆವಿಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ಉಪಕುಲಸಚಿವರು, ಖರೀದಿ ಕೋಶ ಇವರು ಸಭೆಗೆ ವಿವರಿಸಿದರು. ಕ್ರೀಡಾ ಉಪಕರಣಗಳ ಖರೀದಿ ಸಂಬಂಧ ಈ ಹಿಂದಿನ ಟೆಂಡರ್ ಆಹ್ವಾನಿಸಿರುವ ಪ್ರಕ್ರಿಯೆಗಳ ಮಾಹಿತಿ, ಟೆಂಡರ್ ಆಹ್ವಾನಿಸಿರುವ ಮಾರ್ಗಸೂಚಿ ಮತ್ತು ಷರತ್ತುಗಳ ಮಾಹಿತಿ ನೀಡುವಂತೆ ಕುಲಸಚಿವರಿಗೆ ಕು. ಐಶ್ವರ್ಯ ಸುರೇಶ್ ಅವರು ಕೋರಿದರು. ಸದಸ್ಯರಾದ ಶ್ರೀ ಟಿ.ಡಿ. ವಿನಯ್ ಮತ್ತು ಶ್ರೀ ಶ್ರೀನಿವಾಸ್ ಆರ್.ಕೆ. ಅವರು ಈ ಹಿಂದಿನ ಕ್ರೀಡಾ ಟೆಂಡರ್‌ಗೆ ಸಂಬಂಧಿಸಿದಂತೆ ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ನೀಡುವಂತೆ ತಿಳಿಸಿದರು. ಸದಸ್ಯರಾದ ಶ್ರೀ ಶ್ರೀನಿವಾಸ್ ಆರ್.ಕೆ. ಅವರು ಮರು ಟೆಂಡರ್‌ಅನ್ನು ಕರೆಯಲು ಅಸಮ್ಮತಿಯನ್ನು ಸೂಚಿಸಿದರು. ಕು. ಐಶ್ವರ್ಯ ಅವರು ಈ ಹಿಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ಲೋಪದೋಷವಿದ್ದು, ಹಿಂದಿನ ಟೆಂಡರ್ ಅನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲ ಎಂದು ಆಕ್ಷೇಪಿಸಿ, ಮರು ಟೆಂಡರ್ ಕರೆಯುವಂತೆ ಸೂಚಿಸಿದರು. ಮಾನ್ಯ ಕುಲಪತಿಗಳು ಟೆಂಡರ್ ಆಹ್ವಾನಿಸುವ ಸಂಬಂಧ ಪ್ರಕ್ರಿಯೆಗಳ ಬಗ್ಗೆ ವಿವರವಾಗಿ ಸಭೆಗೆ ಮಾಹಿತಿಯನ್ನು ನೀಡಿದರು. ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಹಾಗೂ ವಿಶ್ವವಿದ್ಯಾನಿಲಯಕ್ಕೆ ಉತ್ತಮ |

| | | | |
|---|---|---|---|
| | | | ಗುಣಮಟ್ಟದ ಉಪಕರಣಗಳ ಖರೀದಿಯ ಹಿತದೃಷ್ಟಿಯಿಂದ ಮರು-ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡುವಂತೆ ಮಾನ್ಯ ಕುಲಪತಿಗಳು ಸಭೆಗೆ ವಿವರಿಸಿದರು.<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಈ ಹಿಂದಿನ ಟೆಂಡರ್ ಪ್ರಕ್ರಿಯೆಗಳ ಎಲ್ಲಾ ದಾಖಲೆಗಳ ಜೊತೆಗೆ ಕಾರ್ಯಸೂಚಿಯನ್ನು ಸಿದ್ದಪಡಿಸಿ ಮಂಡಿಸಲು ನಿರ್ಣಯಿಸಲಾಯಿತು. |
| 16 | 2020-21.ಸಾ.ಸಿಂ-01<br>ಸಾ & ಅ ವಿಭಾಗ-08 | ಸ್ನಾತಕೋತ್ತರ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಬಳಕೆ ನೀರನ್ನು ಸರಬರಾಜು ಮಾಡಿರುವ ಹುಂಡಿಗಳ ಮೊತ್ತವನ್ನು ಪಾವತಿಸುವ ಕುರಿತು. | ಸ್ನಾತಕೋತ್ತರ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡಗಳ ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಬಳಕೆ ನೀರನ್ನು ಸರಬರಾಜು ಮಾಡಿರುವ ಹುಂಡಿಗಳ ಮೊತ್ತ ರೂ. 61,600-00 ಮತ್ತು ರೂ. 53,550-00 ಗಳನ್ನು ಪಾವತಿಸಲು ಹಾಗೂ ಸದರಿ ಪ್ರಕ್ರಿಯೆಯನ್ನು ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಅವಶ್ಯಕತೆಗನುಸಾರ ಸರಬರಾಜು ಪಡೆದು ಹುಂಡಿಗಳನ್ನು ಪಾವತಿಸಲು ಅನುಮೋದಿಸಿತು. |

| | | | |
|---|---|---|---|
| 17 | 2020-21.ಸಾ.ಸಿಂ-01<br>ಸಾ & ಅ ವಿಭಾಗ-09 | ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ, ಘಟಕ ಕಾಲೇಜುಗಳು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ವಿದ್ಯಾರ್ಥಿನಿಲಯಗಳು ಹಾಗೂ ಇತರೆ ಎಲ್ಲಾ ವಿಭಾಗಗಳಿಗೆ ದೈನಂದಿನ ಕುಡಿಯುವ ನೀರನ್ನು ಸರಬರಾಜು ಪಡೆಯುವ ಸಂಬಂಧ ವಾರ್ಷಿಕ ದರ ಕರಾರು ಒಪ್ಪಂದ ಮಾಡಿಕೊಳ್ಳುವ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ, ಘಟಕ ಕಾಲೇಜುಗಳು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ವಿದ್ಯಾರ್ಥಿನಿಲಯಗಳು ಹಾಗೂ ಇತರೆ ಎಲ್ಲಾ ವಿಭಾಗಗಳಿಗೆ ದೈನಂದಿನ ಕುಡಿಯುವ ನೀರನ್ನು ಸರಬರಾಜು ಪಡೆಯುವ ಸಂಬಂಧ ಈ ಹಿಂದಿನ ದರದನ್ವಯ ವಾರ್ಷಿಕ ದರ ಸಂದಾನ ಮಾಡಿಕೊಂಡಿರುವುದನ್ನು ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸದರಿ ವಿಷಯಕ್ಕೆ ಸಭೆಯು ಅನುಮೋದಿಸಿ, ದರ ಕರಾರು ಒಪ್ಪಂದ ಮಾಡಿಕೊಳ್ಳಲು ಅನುಮೋದನೆ ನೀಡಿತು. |

### ಇಂಜಿನಿಯರಿಂಗ್ ವಿಭಾಗ

### ತಿಪಟೂರಿನ ಸ್ನಾತಕೋತ್ತರ (ಪಿ.ಜಿ.) ಜಾಗಕ್ಕೆ ತಡೆಗೋಡೆ ನಿರ್ಮಿಸುವ ಬಗ್ಗೆ ಚರ್ಚೆ ಮತ್ತು ನಿರ್ಣಯ

ತಿಪಟೂರಿನ ಸ್ನಾತಕೋತ್ತರ (ಪಿ.ಜಿ.) ಜಾಗಕ್ಕೆ ಪ್ರಾಕಾರಗೋಡೆ ನಿರ್ಮಿಸುವ ಕುರಿತು ಕುಲಸಚಿವರು, ಸದಸ್ಯರುಗಳಾದ ಶ್ರೀ ಪ್ರಸನ್ನ ಕುಮಾರ್, ಶ್ರೀ ಸುನಿಲ್ ಪ್ರಸಾದ್ ಹಾಗೂ ಶ್ರೀ ರಾಜು ಅವರು ತಿಪಟೂರಿನ ಸ್ನಾತಕೋತ್ತರ ಜಾಗಕ್ಕೆ ಭೇಟಿ ನೀಡಿರುವುದನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಸದರಿ ಭೇಟಿಯನ್ನು ಮಾನ್ಯ ಅಧ್ಯಕ್ಷರು ಪ್ರಶಂಸಿಸಿದರು. ತಡೆಗೋಡೆಯನ್ನು ನಿರ್ಮಿಸಿ ವಿ.ವಿ. ಆಸ್ತಿಯನ್ನು ಸಂರಕ್ಷಿಸುವ ಕುರಿತು ಶ್ರೀ ಪ್ರಸನ್ನ ಕುಮಾರ್ ಅವರು ಸಭೆಗೆ ವಿವರಿಸಿದರು ಮತ್ತು ಮುಂದುವರೆದು, ಶ್ರೀ

| |
|---|
| ಶ್ರೀನಿವಾಸ ಆರ್.ಕೆ. ಅವರು ಸಿರಾ ಸ್ನಾತಕೋತ್ತರ ಕೇಂದ್ರಕ್ಕೂ ಸಹಾ ಪ್ರಾಕಾರಗೋಡೆಯನ್ನು ನಿರ್ಮಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು. ಬಿದರೆಕಟ್ಟೆ, ಸಿರಾ ಮತ್ತು ತಿಪಟೂರಿನ ಜಾಗಕ್ಕೆ ಸಿಂಡಿಕೇಟ್ ಸದಸ್ಯರುಗಳು ಭೇಟಿ ನೀಡಲು ಸಭೆಯು ನಿರ್ಣಯಿಸಿತು. ತಿಪಟೂರಿನಲ್ಲಿ ಸಿಂಡಿಕೇಟ್ ಸಭೆಯನ್ನು ಆಯೋಜಿಸಲು ನಿರ್ಣಯಿಸಲಾಯಿತು. ತಿಪಟೂರಿನ ಸ್ನಾತಕೋತ್ತರ ಕೇಂದ್ರದ ಜಮೀನಿಗೆ ತಂತಿಬೇಲಿಯನ್ನು ಹಾಕಿಸಲು ಅಗತ್ಯ ಕ್ರಮವಹಿಸುವಂತೆ ಸಭೆಯು ನಿರ್ಧರಿಸಿತು.<br><br>ಮುಂದಿನ ಶೈಕ್ಷಣಿಕ ಸಾಲಿನಿಂದ ಕೋಕೋನಟ್ ಕೋರ್ಸನ್ನು ಪ್ರಾರಂಭಿಸಿದಲ್ಲಿ, ಎಪಿಎಂಸಿ ಅವರು ಒಟ್ಟಾರೆ ಕಟ್ಟಡವನ್ನು ನೀಡುವುದಾಗಿ ತಿಳಿಸಿದ್ದಾರೆಂದು ಸದಸ್ಯರಾದ ಶ್ರೀ ಪ್ರಸನ್ನ ಕುಮಾರ್ ಮತ್ತು ಶ್ರೀ ರಾಜು ಅವರು ತಿಳಿಸಿದರು. ಸದರಿ ವಿಷಯಕ್ಕೆ ಸಭೆಯು ಅನುಮೋದಿಸಿತು ಹಾಗೂ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ನೂತನ ಡಿಪ್ಲೋಮಾ ಕೋರ್ಸನ್ನು ಪ್ರಾರಂಭಿಸಲು ಕ್ರಮವಹಿಸುವಂತೆ ತಿಳಿಸಿದರು. |
| **ಸಂಶೋಧನೆ ವಿಭಾಗ ಹಾಗೂ ಕಾಲೇಜು ಅಭಿವೃದ್ಧಿ ಪರಿಷತ್** |
| **ಸ್ನಾತಕೋತ್ತರ ಮನೋವಿಜ್ಞಾನ ಸಂಶೋಧನಾ ಕೇಂದ್ರ ಹಾಗೂ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಐಚ್ಛಿಕ ವಿಷಯವಾಗಿ ಮನೋವಿಜ್ಞಾನವನ್ನು ಸೇರಿಸುವ ಬಗ್ಗೆ ಚರ್ಚೆ ಮತ್ತು ನಿರ್ಣಯ** |
| ಸ್ನಾತಕೋತ್ತರ ಮನೋವಿಜ್ಞಾನ ಸಂಶೋಧನಾ ಕೇಂದ್ರ ಹಾಗೂ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ಐಚ್ಛಿಕ ವಿಷಯವಾಗಿ ಮನೋವಿಜ್ಞಾನವನ್ನು ಸೇರಿಸುವ ಕುರಿತು ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಸುತ್ತೋಲೆಯನ್ನು ಕಳುಹಿಸಲು ನಿರ್ಣಯಿಸಲಾಯಿತು. ನಂತರ ಎಲ್ಲಾ ಕಾಲೇಜುಗಳ ಉತ್ತರದ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಶ್ರೀ ವಿನಯ್ ಟಿ.ಡಿ. ಇವರು ತಿಳಿಸಿದರು. |

ಕುಲಸಚಿವರು

ಮಾನ್ಯ ಕುಲಪತಿಗಳು

(CH. PRASANNA KUMAR)

VINAY. T. D

(Ragh)

20/6/22

(SRINIVASA. R.K)

(M. NARASIMHA. M.S)

(B.C. Bhagyalakshmi)